REPAIRS AND MAINTENANCE OF ROADS IN MANDYA DISTRICT

800. Smt. DAMAYANTHI BOREGOWDA (Srirangapatna).—

Will the Minister for Public Works and Electricity be pleased to state—

The amount allotted for special repairs and maintenance of roads in Mandya District?

Sri H. M. CHANNABASAPPA (Minister for Public Works and Electricity).—

Rs. 22.65 lakhs and Rs. 8.50 lakhs respectively.

ಶ್ರೀಮತಿ ದಮಯಂತಿ ಬೋರೇಗೌಡ :—ಮಂಡ್ಯ ಜಿಲ್ಲೆಯಲ್ಲಿ ಷುಗರ್‌ಕೇನ್ ಟ್ಯಾಕ್ಸ್‌ನಿಂದ ಮತ್ತು ಇತರ ಟ್ಯಾಕ್ಸ್‌ಗಳಿಂದ ಎರಡು ಕೋಟಿ ರೂಪಾಯಿ ಬರುವಾಗ ಆ ಜಿಲ್ಲೆಗೆ ಒದಗಿಸಿರುವ ಹಣ ಸಾಲದಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಮಂಡ್ಯ ಜಿಲ್ಲೆಯಲ್ಲಿ ಉತ್ಪತ್ತಿ ಎಷ್ಟು ಬರುತ್ತದೆ ಎನ್ನುವುದನ್ನು ನೋಡಿಕೊಂಡು ಅಲಾಟ್‌ಮೆಂಟ್ ಮಾಡುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ :—ರಸ್ತೆಗಳ ಅವಶ್ಯಕತೆಯನ್ನು ನೋಡಿಯಾದರೂ ಅಲಾಟ್ ಮಾಡುತ್ತಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಅವಶ್ಯಕತೆ ಮತ್ತು ಹಣದ ಸ್ಥಿತಿಗತಿಗಳನ್ನು ನೋಡಿಕೊಂಡು ಅಲಾಟ್ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ :—ಅವಶ್ಯಕತೆಗಳನ್ನು ನೋಡಿ ಅಲಾಟ್ ಮಾಡುವುದಾಗಿ ಹೇಳಿದರು. ಒಂದೊಂದು ಸಾರಿ ನಾಲ್ಕೈದು ಜಿಲ್ಲೆ ಇರುವ ಸರ್ಕಲ್ಲಿಗೂ ಒಂದೇ ಜಿಲ್ಲೆ ಇರುವ ಸರ್ಕಲ್ಲಿಗೂ ಒಂದೇ ರೀತಿಯಾಗಿ ಹಣ ಅಲಾಟ್ ಮಾಡುತ್ತಾರೆ. ನಾಲ್ಕೈದು ಜಿಲ್ಲೆಗಳಿರುವ ಕಡೆ ಹೆಚ್ಚು ಹಣವನ್ನು ಕೊಡುವುದಿಲ್ಲವೆನ್ನುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ? ಆ ರೀತಿ ಇರುವುದನ್ನು ಗಮನಕ್ಕೆ ತಂದರೆ ಸರಿಪಡಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಅಲಾಟ್‌ಮೆಂಟ್ ಮಾಡತಕ್ಕದ್ದು ಆಯಾ ಜಿಲ್ಲೆಗಳು ಮತ್ತು ಸರ್ಕಲ್‌ಗಳಲ್ಲಿ ಎಷ್ಟು ಮೈಲಿ ರಸ್ತೆ ಇದೆ. ಆ ರಸ್ತೆಗಳಲ್ಲಿ ವಾಹನ ಸಂಚಾರದ ಒತ್ತಡವೆಷ್ಟು ಇದೆ ಎನ್ನುವುದನ್ನೆಲ್ಲ ನೋಡಿಕೊಂಡು, ಹಣದ ಸ್ಥಿತಿಗತಿಗಳನ್ನು ನೋಡಿಕೊಂಡು ಸಾಧ್ಯವಾದಷ್ಟೂ ಎಲ್ಲರಿಗೂ ನ್ಯಾಯ ದೊರಕುವಂತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

SUPRESSION OF TENANTS RIGHT BY SHIDENUR TALATHI AND BYADGI TAHSILDAR

867. Sri B. G. BANAKAR (Hirekerur).—

Will the Minister for Revenue be pleased to state:—

(*a*) Whether it is a fact that one Shidlingappa Ujjap, a Hittalamani of Shidenur in Byadgi taluk, District Dharwar was a tenant of R. S. No. 375/1+2 of Shidenur and as such this land was re-granted in his

name for the reason that the Khatedar of this land Shri Hiremath did not pay the amount of re-grant to Government and as such the name of Shidlingappa was entered as Khatedar of this land in Kabjedar column of this land as per Mutation entry No. 541 and as self in the Pahani column of the Record of Rights of this land from 1963-64 ;

(b) whether it is also a fact that this land is again re-granted to its original owners Shri Hiremath and other as per order No. WBN. (G) SR. 303 dated 20-9-1971 passed by the Asst. Commissioner, Haveri without affecting the tenancy rights or results of the tenant Shri Shidlingappa Hittalamani.

(c) whether it is also a f ct that the tenant Shidlingappa Hittalamani had given a wardy by registered post on 23-6-1972 to Tahsildar, Byadgi and also Talathi Shidenur requesting them to enter or maintain his name as tenant as before in view of the order date 20-9-1971 passed by the Assistant Commissioner, Haveri ;

(d) whether the Government is aware of the fact that the Tahasildar, Byadgi and Talathi Shidenur have not taken any action or steps as per the order No. WBN. (G) SR 303 dated 20-9-1971 passed by the Assistant Commissioner, Haveri and also as per wardy given by the tenant and that the tenant's name is deleted and original owner Hiremath's name is entered as owners and that the name of tenant is not entered as tenant in Pahani column of R of R in the place of self as a result of which the tenant is put into trouble by the owner ;

(e) the action taken by the Government ?

Sri N. HUTCHAMASTHY GOWDA (Minister of Revenue):

(a) Yes.

(b) Yes.

(c) Yes.

(d) Yes. The orders of the Asst. Commissioner, Haveri dated 20-9-1971 and 1-12-1972 directing the names of previous tenants and his heirs on record were stayed by the Special Deputy Commissioner on 5-1-1973 on a revision petition filed by Shri C. M. Hiremath.

(e) Pursuant to the orders passed by the Special Deputy Commissioner on 26-3-1973, instructions have been issued to bring the names of tenants on record.

ಶ್ರೀ ಬಿ. ಜಿ. ಬಣಕಾರ್ 5-1-1973 ರಲ್ಲಿ ಸ್ಟೇ ಆರ್ಡರು ಕೊಡಲಾಗಿದೆ ಎಂದು ಹೇಳಿದಿರಿ. 20-9-1971 ರಿಂದಲೇ ಸಿದ್ಲಿಂಗಪ್ಪ ಹಿತ್ತಲಮನಿಯವರು ಗೇಣಿದಾರರು ಎನ್ನುವ ಹೆಸರನ್ನು ಸೇರಿಸದೆ ಇಲ್ಲಿರುವ ಅಧಿಕಾರಿಗಳು ಜಮೀನುದಾರರಿಗೆ ಅನಾನುಕೂಲವಾಗುವಂತಹ ಕೆಲಸಗಳನ್ನು ಮಾಡಿರುವುದರಿಂದ ಇವರ ಮೇಲೆ ಕಾನೂನು ಪ್ರಕಾರ ತಕ್ಕ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ, ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇಲ್ಲಿನ ಕೇಸಿನ ವಿದ್ಯಮಾನಗಳನ್ನು ನೋಡಿ ಅದರ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್ :—ಹಾವೇರಿ ತಾಲ್ಲೂಕಿನ ಶ್ರೀ ಹಿರೇಮಠರವರೂ ಹಾಗೂ ತಹಶೀಲುದಾರರು ಒಂದೇ ಜಾತಿಗೆ ಸೇರಿದವರು ಮತ್ತು ಸಂಬಂಧಿಗಳೂ ಆಗಿರುವುದರಿಂದ ಇಲ್ಲಿ ಉದ್ದೇಶಪೂರ್ವಕವಾಗಿ ಇದರಲ್ಲಿ ಜಮೀನುದಾರರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ, ಆದುದರಿಂದ ಇಲ್ಲಿರುವ ಈ ತಹಶೀಲುದಾರರನ್ನು ಈ ತಾಲ್ಲೂಕಿನಿಂದ ಬೇರೆ ಹೊರಗಿನ ಜಿಲ್ಲೆಗೆ ಕಳುಹಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದರಲ್ಲಿ ಒಂದೇ ಜಾತಿ ಹಾಗೂ ಸಂಬಂಧ ಇದರ ಮೇಲೆ ಮಾಡುವುದಕ್ಕಾಗುವುದಿಲ್ಲ. ಕಾನೂನಿಗೆ ವಿರೋಧವಾಗಿ ಮಾಡಿದ್ದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇವರನ್ನು ತಾಲ್ಲೂಕಿನಿಂದ ಹೊರಕ್ಕೆ ಟ್ರಾನ್ಸ್‌ಫರು ಮಾಡುವುದರಿಂದ ಸರಿಯಾಗುವುದಿಲ್ಲ. ಇದಕ್ಕಿಂತ ಹೆಚ್ಚಿನ ಚಿಕಿತ್ಸೆ ಮಾಡುವುದು ಅವಶ್ಯಕ ಎಂದು ಕಂಡು ಬಂದರೆ ಅದನ್ನೂ ಮಾಡುತ್ತೇವೆ.

ಶ್ರೀ ಬಿ. ಜಿ. ಬಣಕಾರ್ :—ಸಬ್‌ರಿಜಿಸ್ಟ್ರಾರ್ ಆಫೀಸುಗಳಲ್ಲಿ ಆರ್. ಆರ್. ರೈಟುಗಳ ಪ್ರಕಾರ ದಾಖಲೆಗಳನ್ನು ಇಲ್ಲಿರುವ ತಲಾಟಿಗಳು ಕೊಡುವುದರಲ್ಲಿ ನಿಧಾನವಾಗುತ್ತಿದೆ, ಎರಡು ಮೂರು ವರ್ಷಗಳಾದರೂ ದಾಖಲಿ ಪತ್ರಗಳು ಸಿಗುವುದಿಲ್ಲ. ಇಂತಹ ತಲಾಟಿಗಳ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ? ಇಲ್ಲವೇ ಇದರ ಬಗ್ಗೆ ಸರಿಯಾದ ಆದೇಶವನ್ನೇನಾದರೂ ಕಳುಹಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಎಲ್ಲ ಅಧಿಕಾರಿಗಳಿಗೂ ಈಗಾಗಲೇ ಆದೇಶವನ್ನು ಕಳುಹಿಸಲಾಗಿದೆ. ಆದಷ್ಟುಮಟ್ಟಿಗೆ ಜಾಗ್ರತೆಯಾಗಿ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಬಾಕಿಯಾಗಿ ನಿಲ್ಲಿಸಬಾರದು ಎಂದೂ ಆದೇಶ ಕೊಡಲಾಗಿದೆ.

EXPLORATION OF IRON ORE AND LIMESTONE IN MATHYGHATTA IN SIRSI TALUK

896. SMT. RADHA BHATT (Ankola).—

Will the Minister for Industries be pleased to state :—

(*a*) whether Government have conducted exploration regarding the mineral wealth available in plenty in Mathyghatta (Madyaghatta) of Sirsi Taluk ;

(*b*) if so, the details thereon ;

(*c*) whether any action would be taken for utilising lime-stone and iron ore in case they are available in plenty in this area ?

Sri S. M. KRISHNA (Minister for Industries) :—

(*a*) Exploration was conducted near Mathyghatta regarding Minerals available in 1970-71.

(*b*) Exploration was conducted regarding Iron ore, Limestone and Manganese.